(SRI J. MOHAMED IMAM.)

afterwards sought the approval of the Parliament. Similarly, the Government of Mysore can do the same thing.

MR. SPEAKER.—You are speaking on the merits of the case.

SRI J. MOHAMED IMAM.—Not on the merits. He should have considered the question of nationalisation and taken over the concern. Otherwise, if he delays, it may mean a good deal of loss to Government and so many things may happen in the concern. When once they make up their mind, they must do at once.

SRI K. S. VASAN (Kolar Gold Fields).—I want a clarification on this. Would the Hon'ble Minister kindly tell us if it is not true that the B.T.C. is already busy disposing of, by selling, a lot of their property ?

SRI H. SIDDAVEERAPPA.—Not at all. I assure you that not a pin will be sold without the express orders of the Government and what is more, ಹಾಗೆ ಅವರು ಯಾವುದನ್ನೂ ಮಾರಾಟ ಮಾಡಿಲ್ಲ. ಯಾರೋ ಜನರು ಆ ರೀತಿ ಹೇಳುತ್ತಾರೆ ಎಂದು ಆ ಮಾತುಗಳನ್ನು ಕೇಳಿಕೊಂಡು ಆ ಮಾತುಗಳನ್ನು ನಂಬಿ ಕೆಲಸ ಮಾಡುವುದಕ್ಕಾಗುವುದಿಲ್ಲ. And I have issued instructions. Nothing has been sold and I may tell you they are not interested in carrying it off and if it is the will of this House that we have to do it by ordinance, we may do it, but generally Government are reluctant to use the ordinance power unless it is absolutely essential.

SRI M. RAJASEKHARA MURTHY (Yelandur).—The Hon'ble Minister made a reference to the introduction of the Bill for the nationalisation of the B. T. C. The Government of India have proposed series of amendments to the Indian Motor Vehicles Act relating to nationalisation. According to this amendment, any State Government may take up any route after a Gazette notification. There is also an amendment relating to the computation of compensation. This amendment Bill is introduced in the Parliament and is going to be enacted into law shortly. In view of this amending Bill, there is no need for the State Government to introduce a Bill in the State Legislature. I hope the Minister will clarify the point to the House.

SRI H. SIDDAVEERAPPA.—What that draft Bill contains has also been taken note of by me when drafting this Bill and, as a matter of fact, that Bill is still before the Parliament and it has not been enacted as a law as yet. We will examine it and if there is any need, then the question of ordinance will also be examined.

(*Sri Mulka Govinda Reddy rose.*)

SRI K. HANUMANTHAIYA (Leader of the House).—There is a definite procedure laid down. I am not happy to make this observation. The mover of the motion explains and the Government replies. It has again turned into a general debate. I leave it at that.

MR. SPEAKER.—Hon'ble Members are aware that one of the conditions pre-requisite for admission of an adjournment motion is that it should be urgent, that is, that the situation is such that debate thereon brooks no delay. I am of the view that the subject is not of such urgency as to require it to be taken up in supersession of the appointed business. Therefore, I hold that the motion is not admissible.

STATES REORGANISATION BILL, 1956.

Motion to consider—(contd.).

SRI M. LINGANNA (Nanjangud).—The Draft Bill of the States Reorganisation is being considered by this House since two days and I wholeheartedly welcome it. And some members of course advanced arguments in support of the Bill and in the end they came to the conclusion that further expansion is a necessity and also it is in the interests of the whole of India. Before I speak a few words about that aspect of the question, one matter that probably has engaged the mind of this House and also the members who are expected to be with us just after the appointed day is about the name of the future State that is envisaged under clause 7 of the Draft Bill. It is definitely said in that Bill that the new State is to be named as the State of Mysore.

Also it is fresh in our memory that a resolution to this effect was passed in this House, requesting the Government of India to name the State as 'Mysore'. Of course, at that particular moment when the House passed that resolution unanimously, one factor that we have ignored was that we did not consult the friends who are destined to come to us. (A Voice.—There was no need). It is the opinion probably of some of my friends that there was no need to consult them about such a matter. But I hold that there is some force in what I say that we ought to have consulted them formally or informally about the nomenclature to be given to the new State, because we have seen all these years that all these things pertaining to reorganization of States should be done at best by mutual consultations and by amicable settlements and I believe that, if those friends had been consulted, the discordant opinion would have vanished.

Sri R. CHENNIGARAMIAH (Madhugiri-Koratagere—Scheduled Castes).—His observation about the decision of the House is not called for.

Sri M. LINGANNA.—I am coming to that. That is the reason why probably discordant opinion has arisen there. Now I submit that their feelings also might be genuine and that we cannot question it because it is a matter belonging to history. But anyway it is not such a difficult matter even now for us to take those friends into confidence when they come over to us and to convert them to our views so far as the name is concerned. But one factor that strikes my mind to retain the name of Mysore is not because I am enamoured of the name of the royal family that has been attached to it, nor because of any other historic factor, but because of this one practical convenience that would result out of retaining the name as 'Mysore' and that is this. We have got a State Legislature, we have got a Cabinet and all the other parts that are going to be included in the new State of Mysore will be parts that will be put into this new State and they will be coming to us from Bombay, from Madras and from Hyderabad. Now we have passed so many enactments, so many legislations in this House and all these legislative enactments will in course of time have to be extended to the other parts as we did so far as Bellary is concerned.

Now let us take the picture of changing the name to Karnatak or retaining it as Karnatak. Then all the laws that we have passed,—probably every one of us is aware that up to 1954, 4 volumes of Statutes have been printed and we are in possession of those 4 volumes—and if the name is changed, by a simple change of that kind, all those enactments will have to be amended. Wherever there is the word 'Mysore' we will have to change it by means of an amendment and many other difficulties also will arise. Also, after that, we have taken a decision in this regard and the opinion is being upheld by the Government of India and whatever might be the feelings of the friends that are going to come to us, it is a duty cast on the people who are representing the State of Mysore, to take them into confidence and to convert them unto our views. Also I appeal to the other friends that are coming to us, to reconcile themselves when after all there is nothing to be enamoured of in a name, because I am one of those who agree with Shakespear when he says 'After all, what is there in a name!'.

1-30 P.M.

Next, the idea of Zonal Councils is embedded in clauses 15 to 21. I have bestowed some little thought over this particular miniature intermediary constitutional set-up in between the State Government and the Government of India. The authors of Zonal Council have held out a high hope of converting the Zonal Council probably in the years to come into a Legislature by means of which all the States that would come under particular Zonal Council would be governed by one Legislature and also probably by one Cabinet. Sir, if really they intend that it should slowly grow into that stature, I believe at this stage there is every need of making this body more powerful than it looks to be. Now,

(SRI M. LINGANNA.)

under the several provisions that are contemplated in this Bill, after all what this Zonal Council is going to deliberate upon may or may not carry any weight either with the Government of India or with the State Government, and finally if at all anything were to result it will result as if it were an order from the Government of India. Suppose a dispute arises for the division of waters between one State and another in a particular Zonal Council. If they do not agree in the Zonal Council, the matter will be automatically seized of by the State Government and the Central Government. Then, Sir, arbitration or the final decision will be from the Government of India, which will have to be adhered to by the State Government. Taking this particular example, it is just as if the Zonal Council is non-existent in the sense that the deliberations of the Zonal Council will have no effect whatsoever.

Further, so far as 21 A is concerned wherein it is stated that the Zonal Council can deliberate on the border disputes arising out of the Bill, probably it is not a good idea because in the explanatory note we are given to understand that wherever it is necessary and feasible a Boundary Commission will have to be set up. If really the Government of India mean to set up a Boundary Commission wherever they are very necessary, then the particular provision under Zonal Council is not necessary. As stated by some Hon'ble Members, that, I believe, will lead to a lot of controversy and probably there may not be any finality there. If the Government of India want to retain this clause, I submit that there must be a proviso stating that disputes arising out of a particular border or out of territories pertaining to any particular State shall be arbitrated upon by the Boundary Commission if not resolved by the Zonal Council to be appointed by the Government of India. Then probably we can retain that particular clause as it is. Otherwise, it will have no effect.

An idea is suggested and it is gaining ground not only in Mysore but even in the northern India that the time has come when we have to think in terms of two or three States. Probably the idea suddenly came as if it was a bolt from the blue after the way in which things happened in Bombay.

A MEMBER.—In Belgaum also.

Sri M. LINGANNA.—Yes and in Orissa and some other parts of the country. There were disorders and so much of tempo was released and we saw how the whole nation there was almost mad!

Mr. SPEAKER.—The Hon'ble Member is repeating what the other Hon'ble Members have stated already.

Sri M. LINGANNA.—That idea of two or three States is gaining ground. And some of our friends here who were a bit reluctant for the expansion of Mysore have also come round and have said that wherever it is possible and feasible we should welcome such a move. Sir, I for one would submit further that it is in the best interests of the South India that all the four States be put together to form themselves into one Government if that is really possible and if all the parties agree. My point of view is that the resolution of the Amritsar Session is mainly based upon the safety and the security of the whole of the nation. Also the present atmosphere is one which probably is not so calm. If really the security of the nation is in the heart of the leaders and if really the leaders mean that the security and security alone is the main and primary consideration, then I submit to the House that all the four States put together are brought under one Zonal Council and formed into one Government provided there is agreement. They may provide for the Regional Councils as they have provided for PEPSU and the Punjab.

I am not going into the details or the practical aspects of the proposition. Now we are seeing the prospects of Bihar and Bengal merger. They have not progressed well. But anyway the idea is there. If all the four States in the South were to join hands and come together by agreement and if it is in the interests of the nation, probably every one of the Indians will have to welcome that move. I for one in the interest of

the nation do welcome the formation of a State comprising four States with a Regional Council as such, provided all the joint States express themselves in favour of it.

Sri V. M. MASCARENHAS (St. John's Hill).—I welcome this Bill. Last November this House moved a resolution on this very States' reorganisation and. . . .

Sri B. V. NARAYANA REDDY (Bagepalli-Gudibanda).—Up to what time we will have general discussion, Sir?

Mr. SPEAKER.—Till 2-30 P.M.

Sri V. M. MASCARENHAS.—In November last this House moved a resolution in which it said :

> "In forming the new State we in this House would be very happy to see that the name of Mysore for the new State was retained and that the disputed Bellary District would come back to us."

Today it is gratifying to note that both these things have come to pass and I think it is our duty to congratulate and thank the Central Government on acceding to our wishes in these two directions.

As soon as this pronouncement was made on January 16 this year, repercussions took place in some parts of India unfortunately. I use the word 'unfortunately' because history will admit that those repercussions would remain a blot on the good political name of this country. It went to such an extent that our leaders themselves perhaps got into a panic. Everywhere there was commotion. Some went to the extent of saying that the reorganisation of States must be shelved for a period of ten years while others said that uni-lingual States were a huge mistake and bi-lingual or multi-lingual States are the only safety for the future of India. I for one am not inclined to believe and go so far, because it is my belief that, if a handful of Britishers, perfectly alien to this country, could rule India for over a century and a half safely and securely minding the progress of this great nation, could it not be believed that our own leaders who are elected by us in a democratic manner and having our perfect confidence and love, are not able to rule this country peacefully. Have they lost our confidence? Whether States be bi-lingual or uni-lingual, have the people in India lost their sense of patriotism and love for their country and would they like to see that the unity of the country is in danger? I do not believe that any Indian will go to that length. To say that India would be in danger if uni-lingual States are allowed to continue, I am afraid, is a statement which should be revised and which cannot be accepted at its face value. As the Chief Minister pointed out yesterday in the South, if more than one State were willing to join and come to some understanding, it is perfectly right and we would not be against it. It is a question of mutual agreement, and if one was not prepared to join, there was no forcing one's views or asking them to join us against their will. As my friend Sri Linganna pointed out, if these four States in the South have something in common and join together and form a larger State, so far so good. But until such a time comes, what this Bill contemplates, namely, greater Mysore, Madras, Andhra and Telengana and Kerala, let them come into being, and let them go on for a few years. Let us see how far they succeed. And if tomorrow it is felt by judging the work of these States that it is in our interests to have bigger States, certainly it is not too late to revise our decision and come to an understanding regarding larger State. But what is more important is this: when we form the new State not only the neighbouring people that will come to us should be amenable to reason, but also we in our turn should receive them with open arms, in arms of friendship and of love so that whatever we may do in future may be for the good of the State and for the good of India and for its progress and welfare.

Mr. SPEAKER.—I request Hon'ble Members not to repeat arguments so that some more members may take part in the discussion.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ರಾಜ್ಯಪುನರ್ವಿಂಗಡಣೆಯಲ್ಲಿ ಈಗ ಬಂದಿರತಕ್ಕ ವ್ಯವಸ್ಥೆಯನ್ನು ನಾನು ಸ್ವಾಗತಿಸುತ್ತೇನೆ. ಮುಖ್ಯವಾಗಿ ಬಳ್ಳಾರಿ ಜಿಲ್ಲೆಯ ವಿಚಾರದಲ್ಲಿದ್ದ ಅನುಮಾನ ಪರಿ

(ಶ್ರೀ ಬಿ. ಹುಚ್ಚೇಗೌಡ.)

ಹಾರವಾದದ್ದು ಎಲ್ಲರಿಗೂ ಸಂತೋಷದ ವಿಚಾರ. ಪ್ರಾಂತ್ಯ ವಿಂಗಡಣೆ ಮಾಡುವಾಗ ಭಾಷೆಗೇ ಅಷ್ಟಾಗಿ ಪ್ರಾಧಾನ್ಯ ಕೊಡಬಾರದೆಂಬುದೇ ನನ್ನ ಅಭಿಪ್ರಾಯ. ಆದರೂ ಕೂಡ ಭಾಷೆಗೆ ಪ್ರಾಧಾನ್ಯವನ್ನು ಕೊಡಬೇಕಾಗುತ್ತದೆ. ಈಗ ಮೈಸೂರು ಮತ್ತು ಇತರ ನಾಲ್ಕು ಸಂಸ್ಥಾನಗಳು ಸೇರುವುದರಲ್ಲಿ ಮೈಸೂರು ಮತ್ತು ಕೊಡಗು ಬಿಟ್ಟರೆ ಉಳಿದ ಮೂರು ಸಂಸ್ಥಾನಗಳಿಂದಲೂ ಈ ಸಂಸ್ಥಾನಕ್ಕೆ ಕೊಂಚ ಕೊಂಚ ಭಾಗ ಬರುತ್ತದೆ. ಆ ಪ್ರಾಂತಗಳಲ್ಲಿ ಕನ್ನಡ ಭಾಷೆ ಮಾತನಾಡತಕ್ಕವರು ಬಹಳಮಟ್ಟಿಗೆ ಹಿಂದೆ ಇರತಕ್ಕ ಸ್ಥಿತಿಯಲ್ಲಿದ್ದಾರೆ. ಉದಾಹರಣೆಗೆ ಜನಸಂಖ್ಯೆ ತೆಗೆದುಕೊಂಡರೆ ಗ್ರಾಮಾಂತರಗಳಲ್ಲಿ ಶೇಕಡ 90—95 ಇದ್ದರೂ ಕೂಡ ಪಟ್ಟಣಗಳಲ್ಲಿ ಕೇವಲ ಶೇಕಡ ಐದು ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಇತರ ಭಾಷೆ ಮಾತನಾಡತಕ್ಕವರ ಸಂಖ್ಯೆ ಶೇಕಡ ಒಂದು ಇದ್ದರೆ, ಪಟ್ಟಣಗಳಲ್ಲಿ ಶೇಕಡ 10ರಿಂದ 25ರವರೆಗೂ ಇದೆ. ಇದರಲ್ಲಿ ಮುಖ್ಯವಾಗಿ ಆಡಳಿತ, ವ್ಯಾಪಾರ ಮತ್ತು ವ್ಯವಹಾರ ಮುಂತಾದುವುಗಳಲ್ಲಿ ಆ ಭಾಷೆಯವರಿಗೆ ಅಷ್ಟು ಪ್ರಾಧಾನ್ಯತೆ ಬಂದಿಲ್ಲ. ಇದರಿಂದ ಸಾಮಾನ್ಯವಾಗಿ ಒಂದು ಭಾಷೆಯಾಡತಕ್ಕ ಜನ ಒಂದು ಕಡೆ ಇದ್ದರೆ ಒಳ್ಳೆಯದು ಎಂದು ಹೇಳುವುದು ಸ್ವಾಭಾವಿಕ ಮತ್ತು ವಾಸ್ತವವಾದ ಸ್ಥಿತಿ. ಇಂಥ ಸಂದರ್ಭದಲ್ಲಿ ಪ್ರಾಂತಗಳ ವಿಂಗಡಣೆಯಿಂದ ಅವರಿಗೆ ಅನುಕೂಲವಾದದ್ದು ಒಂದು ಸಂತೋಷ ಸೂಚಕವಾದ ಸಂಗತಿ.

ಮತ್ತೊಂದು ವಿಚಾರವೇನೆಂದರೆ ಈ ಬಿಲ್ಲಿನಲ್ಲಿ ಕೆಲವು ತೀವ್ರವಾದ ಬದಲಾವಣೆಗಳು ಕೂಡ ಇವೆ. ಆದರೂ ಕೂಡ ಅವು ಅಷ್ಟಾಗಿ ಪ್ರಗತಿ ಮಾರ್ಗದಲ್ಲಿಲ್ಲ. ಈ ಸಂಸ್ಥಾನಗಳಲ್ಲಿ ಇದುವರೆಗೂ ಇದ್ದ ಎ. ಬಿ. ಸಿ. ಎಂಬ ವ್ಯತ್ಯಾಸವೇನೋ ಹೋಗುತ್ತದೆ. ಆದರೆ ಪುನಃ ಎರಡು ಬಗೆಯಾಗಿ ವಿಂಗಡಣೆಯಾಗಿದೆ: ಇಂಡಿಯಾ ಸರ್ಕಾರದ ನೇರವಾದ ಆಡಳಿತಕ್ಕೆ ಒಳಪಟ್ಟ ಪ್ರದೇಶ ಮತ್ತು ಸಂಸ್ಥಾನಗಳಾಗಿರತಕ್ಕ ಪ್ರದೇಶ. ನೇರವಾದ ಆಡಳಿತದಲ್ಲಿರತಕ್ಕವರಿಗೆ ಸ್ವತಃ ಆಡಳಿತ ನಡೆಸುವ ಯಾವ ವಿಧವಾದ ಅಧಿಕಾರವೂ ಇಲ್ಲದೆ ಬರೀ ಕೇಂದ್ರ ಸರ್ಕಾರದ ಆಡಳಿತಕ್ಕೊಳಪಟ್ಟಿರುವುದರಿಂದ ಅವರಿಗಿರುವ ಹಕ್ಕುಗಳನ್ನೂ ಅಧಿಕಾರವನ್ನೂ ಮೊಟಕು ಮಾಡಿದಂತಾಗುತ್ತದೆ. ಲಕ್ಷ ದ್ವೀಪಗಳು ಮತ್ತು ಮಿನಿಕಾಯ್ ದ್ವೀಪಗಳು ಇದುವರೆಗೂ ಮಲಬಾರು ಜಿಲ್ಲೆಗೆ ಸೇರಿದ್ದು ಮದರಾಸು ಸರ್ಕಾರದ ಆಡಳಿತಕ್ಕೆ ಇಲ್ಲಿಯವರೆಗೂ ಸಹ ಒಳಪಟ್ಟಿದ್ದವು. ಈಗ ಆ ದ್ವೀಪಗಳನ್ನು ಕೇಂದ್ರದ ಆಡಳಿತಕ್ಕೆ ಸೇರಿಸಿಕೊಳ್ಳಬೇಕೆಂದು ಮಾಡಿದ್ದಾರೆ. ಹಾಗೆಯೇ ದಕ್ಷಿಣ ಕೆನರ ಜಿಲ್ಲೆಗೆ ಸೇರಿದ ಅಮಿನಿದಿವಿ ದ್ವೀಪಗಳನ್ನೂ ಕೇಂದ್ರಕ್ಕೆ ತೆಗೆದುಕೊಳ್ಳಬೇಕೆಂದಿದ್ದಾರೆ. ಈಗಿನ ಆಡಳಿತದಲ್ಲಿ ವಿಶೇಷವಾಗಿ ಕೇಂದ್ರೀಕರಣವಾಗಿದೆ. ಪ್ರತಿಯೊಂದು ದೇಶದಲ್ಲಿಯೂ ನಡೆಯಬೇಕಾದ ಪ್ರತಿಯೊಂದು ವ್ಯವಹಾರದಲ್ಲಿಯೂ ಕೂಡ ಕೇಂದ್ರದ ಕೈವಾಡವಿದ್ದೇ ಇದೆ. ಅದರಲ್ಲಿಯೂ ಬೊಂಬಾಯಿ ಪಟ್ಟಣದಂಥ ಕಡೆಯಲ್ಲಿಯೂ ಕೂಡ ಯಾವ ರೀತಿಯ ಸ್ವತಂತ್ರ ಆಡಳಿತವಿಲ್ಲದೆ ಕೇಂದ್ರದ ನೇರವಾದ ಆಡಳಿತಕ್ಕೆ ಒಳಪಟ್ಟಿರುವುದು ಅನ್ಯಾಯ. ಇದು ಪ್ರತಿಗಾಮಿ ತತ್ವಕ್ಕೆ ಒಳಪಟ್ಟಿದೆ ಎಂದು ಧಾರಾಳವಾಗಿ ಹೇಳುತ್ತೇನೆ.

ಜೋನಲ್ ಕೌನ್ಸಿಲ್‌ಗಳ ರಚನೆಯನ್ನು ತೀವ್ರವಾಗಿ ವಿರೋಧಿಸುತ್ತೇನೆ. ಯಾವುದೇ ಒಂದು ಸಂಸ್ಥೆಯಾಗಲಿ ಅದು ಸಲಹಾ ಸಂಸ್ಥೆಯಲ್ಲದೆ ಆಡಳಿತದ ಜವಾಬ್ದಾರಿ ಇರಬೇಕಾದ ಸಂಸ್ಥೆಯಾಗಿರಬೇಕಾದದ್ದು ಅವಶ್ಯಕ. ಅದಕ್ಕೋಸ್ಕರವೇ zonal ಅಂದರೆ ದಕ್ಷಿಣ ಉತ್ತರ ಪ್ರದೇಶ ಹೀಗೆ ಮಾಡುವುದರಲ್ಲಿ ನಮ್ಮ ಅಭಿಪ್ರಾಯಗಳು ಭಿನ್ನವಾಗುವುದಕ್ಕೆ ಕಾರಣವಾಗಿದೆ. ನಿಜವಾಗಿ ಕೇಂದ್ರಕ್ಕೆ ಇರತಕ್ಕ ಅಧಿಕಾರವನ್ನು ಈ ಪ್ರದೇಶಗಳಿಗೆ ಕೊಟ್ಟು ಆಯಾ ಪ್ರದೇಶಗಳಲ್ಲಿ ಪೂರ್ಣ ವ್ಯವಹಾರಕ್ಕೆ ಸರ್ವ ಸ್ವಾತಂತ್ರ್ಯವಿರುವಂತೆ ಮಾಡುವುದಾದರೆ ಈ ಪ್ರದೇಶಗಳು ಇರಬೇಕಾದದ್ದು ಸರಿ. ಹಿಂದೆ ಮಹಾರಾಜರ ಕಾಲದಲ್ಲಿ ಬ್ರಿಟಿಷ್ ಆಳ್ವಿಕೆ ಇದ್ದಾಗ ಅವರ ಮೇಲೆ ಒಬ್ಬ ರೆಸಿಡೆಂಟರು ಅಧಿಕಾರ ನೋಡಿಕೊಳ್ಳುತ್ತಿದ್ದರು. ಹಾಗೆಯೇ ಈಗಲೂ ಸಹ ಮತ್ತಷ್ಟು ಕೇಂದ್ರೀಕರಣ ಮಾಡುವುದಕ್ಕೆ ಮತ್ತು ಈ ಸರ್ಕಾರಗಳ ಮೇಲೆ ರೆಸಿಡೆಂಟರೋಪಾದಿಯಲ್ಲಿ ಒಬ್ಬರು ಕೇಂದ್ರ ಸರ್ಕಾರದ ಸಚಿವರನ್ನು Zonal Councilಗಳ ಛೇರ್‌ಮನ್‌ರಾಗಿ ನೇಮಿಸುವುದು ಮಾತ್ರವಲ್ಲದೆ ಅಲ್ಲಿಯ ವಿಚಾರಗಳನ್ನು ಬಗೆಹರಿಸುವುದಕ್ಕೆ ನೇರವಾಗಿ ಕೈಹಾಕುವಂತೆ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಅದು ಬಿಟ್ಟು ದಕ್ಷಿಣ ಪ್ರದೇಶ ಮಾಡಬೇಕಾದರೆ ನಾಲ್ಕು ಸಂಸ್ಥಾನಗಳೂ ಕೂಡ ಒಟ್ಟಿಗೆ ಸೇರಬೇಕು. ಯಾವ ಸಂಸ್ಥಾನಗಳು ಸೇರಿದರೂ ಕೂಡ ಅದಕ್ಕೆ ಪೂರ್ಣ ಸ್ವಾತಂತ್ರ್ಯವಿರಬೇಕು. ಒಂದೇ ಆಡಳಿತ ಸರ್ಕಾರವಿರಬೇಕು ಮತ್ತು ಈಗ ಕೇಂದ್ರಕ್ಕೆ ಸೇರತಕ್ಕ, ಯೂನಿಯನ್‌ನಲ್ಲಿ ಸೇರಿರತಕ್ಕ subjects ಎಲ್ಲವೂ ಕೂಡ, Defence, Foreign Affairs, Communications ಇವು ಮೂರನ್ನು ಮಾತ್ರ ಬಿಟ್ಟು ಉಳಿದ ಎಲ್ಲವೂ ಪ್ರದೇಶ ಸರ್ಕಾರಕ್ಕೆ ವಹಿಸಲ್ಪಡಬೇಕು ಮತ್ತು ಆಯಾ ಸ್ಥಳೀಯ ಸಂಸ್ಥೆಗಳಿಗೆ, ಅವರೇ ಮುಂದುವರಿಯುವುದಕ್ಕೆ, ಅವರ ಆಡಳಿತದಲ್ಲಿ ಅವರೇ ಸ್ವತಂತ್ರವಾಗಿ ವ್ಯವಹರಿಸಿ ತಮ್ಮ ಆಗುಹೋಗುಗಳನ್ನು ನೋಡಿಕೊಳ್ಳುವುದಕ್ಕೆ ಸಾಕಾದಷ್ಟು ಹಣ ಸಹಾಯವುಳ್ಳಂಥ ಸಂಸ್ಥೆಯಾಗಿ ಏರ್ಪಡುವುದಾದರೆ ಸಂತೋಷ. ಅದನ್ನು ಬಿಟ್ಟು Zonal Councils ಎಂದು ಸಲಹಾ ಸಮಿತಿಗಳನ್ನು ಮಾಡುವುದಕ್ಕೆ ಖಂಡಿತವಾಗಿ ನಾನು ಒಪ್ಪಲು ಸಾಧ್ಯವಿಲ್ಲ.

ಅದೂ ಅಲ್ಲದೆ ಮೇಲ್ಮನೆ (Legislative Council) ಇರುವುದನ್ನು ಕೂಡ ನಾನು ವಿರೋಧಿಸುತ್ತೇನೆ. ಅದರ ಸ್ಥಾಪನೆಗೆ ನಾವೇ ಜವಾಬ್ದಾರರಾಗಿದ್ದೇವೆ. ಆ ವಿಷಯವನ್ನು ಕೇಳುವುದಕ್ಕೆ ಕೂಡ ಅಧಿಕಾರವಿದೆ ಎಂದು ನನ್ನ ಭಾವನೆ. ಈ ಲೆಜಿಸ್ಲೇಟಿವ್ ಕೌನ್ಸಿಲ್ ಇರುವುದು—ಹಿಂದೆ ಬ್ರಿಟಿಷರ ಆಡಳಿತದಲ್ಲಿ ಒಂದು check ಇಡುವುದಕ್ಕೋಸ್ಕರ, ಒಂದು corrective body ಎಂದು ಹೇಳುತ್ತಿದ್ದರು—ಆ ರೀತಿಯಿದೆ. ಅವರಿಂದ directive ಅಷ್ಟಾಗಿ ತೆಗೆದುಕೊಂಡಿಲ್ಲ. ಆ ರೀತಿ ತೆಗೆದುಕೊಳ್ಳಬೇಕಾದ ಸನ್ನಿವೇಶವೂ ಇಲ್ಲ. ಈ ಸಭೆಗೆ ಆಡಳಿತ ನಡೆಸುವುದಕ್ಕೆ ಸಾಮರ್ಥ್ಯವಿದೆ. ಆದುದರಿಂದ ಇಲ್ಲಿ ಎರಡು ಕಡೆ ಪ್ರತಿಯೊಂದು ವಿಚಾರವನ್ನೂ ತಂದು ಅದನ್ನು ನಡೆಸುವುದಕ್ಕೆ ಹೀಗೆ duplicate work ಮಾಡುವುದು ಸರಿಯಾದುದಲ್ಲ ಮತ್ತು ಹಾಗೆ ಮಾಡುವುದು ನಮ್ಮ ಗೌರವಕ್ಕೆ ಸರಿಯಾದುದಲ್ಲ. ಆದುದರಿಂದ ಈ ಮೇಲ್ಮನೆಯನ್ನು ವಜಾ ಮಾಡಬೇಕೆಂದು ಸೂಚಿಸುತ್ತೇನೆ. ಅದರ ಜೊತೆಗೆ ಮೇಲ್ಮನೆಯಲ್ಲಿರುವ 30-40 ಸದಸ್ಯರ ಸ್ಥಾನಗಳನ್ನೂ ಸಹ ಈ ಸಭೆಗೇ ಹೆಚ್ಚುಮಾಡಿ ಸೇರಿಸಿಕೊಂಡರೆ ಅನುಕೂಲವಾಗುತ್ತದೆ ಎಂದು ಸಲಹೆ ಮಾಡುತ್ತೇನೆ.

ಸರ್ವಿಸ್ ವಿಚಾರದಲ್ಲಿ, ಯಾರೇ ಆಗಲಿ, ಹೊರಗಿನವರಿಗೆ ಹೆಚ್ಚು ಸಂಬಳ ಬಂದರೂ, ನಮ್ಮವರಿಗೆ ಕಡಿಮೆ

ಸಂಬಳ ಈಗ ಬರುತ್ತಿದ್ದರೂ; ಅವರನ್ನು ದರ್ಜೆಯ ಮೇಲೆ ವಿಂಗಡಿಸಬೇಕು ; ಅವರಿಗೆ ಬರುವ ಸಂಬಳದ ಮೇಲೆ ವಿಂಗಡಿಸಬಾರದು. ಹೀಗೆ ಮಾಡಿದರೆ ಬಹಳ ಅನ್ಯಾಯವಾಗುತ್ತದೆ. ನಮ್ಮ ಮೈಸೂರು ದೇಶದಲ್ಲಿರುವ ಎಲ್ಲ ಸರ್ಕಾರಿ ನೌಕರರ ವರ್ಗದವರ ಸಂಬಳ ಸಾರಿಗೆಗಳನ್ನೂ ಮತ್ತು ದರ್ಜೆಯನ್ನೂ ಏರಿಸಿ ಒಂದು ಸಮ ಮಾಡಬೇಕೆಂದು ಈ ಮೊದಲೇ ಸೂಚಿಸಿದೆವು. ಆದರೆ ಆ ರೀತಿ ಮಾಡಲಿಲ್ಲ. ಅದಕ್ಕಾಗಿಯೇ ಅಧಿಕಾರಿಗಳ seniority ವಗೈರೆ ನಿಗದಿ ಮಾಡುವಾಗ ಅವರ ಸಂಬಳವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳದೆ ಅವರ ಹುದ್ದೆ ಮತ್ತು ದರ್ಜೆಯ ಮೇಲೆ ವಿಂಗಡಿಸಬೇಕು. ಇಲ್ಲದೆ ಇದ್ದರೆ ನಾವು ರೈಲ್ವೆ ವಿಚಾರದಲ್ಲಿ ಮತ್ತು ಮಿಲಿಟರಿ ವಿಚಾರದಲ್ಲಿ ಯಾವ ಕರ್ತವ್ಯ ಭ್ರಷ್ಟತೆಯನ್ನು ತೋರಿಸಿದೆವೋ ಪುನಃ ಅದೇ ರೀತಿಯಲ್ಲಿ ಕರ್ತವ್ಯಭ್ರಷ್ಟರಾಗುತ್ತೇವೆಂದು ಸೂಚಿಸುತ್ತೇನೆ.

ಇನ್ನೊಂದು ವಿಚಾರ. Status of High Courts ಸಂಬಂಧದಲ್ಲಿ ಎಲ್ಲರಿಗೂ ಒಂದೇ ಸೌಕರ್ಯವನ್ನು ಕೊಟ್ಟರೂ ಕೂಡ, ಮೈಸೂರು, ತಿರುವಾಂಕೂರು ಮತ್ತು ರಾಜಸ್ಥಾನದ ಹೈಕೋರ್ಟಿನ ಜಡ್ಜಿಗಳ ಸಂಬಳವನ್ನು ಇತರ ಕಡೆಗಳಿಗಿಂತ ಒಂದು ಸಾವಿರ ರೂಪಾಯಿ ಕಡಿಮೆ ಮಾಡಿದ್ದಾರೆ. ಇದು ನಮ್ಮ ದೇಶದ ಸ್ಥಿತಿಗತಿಗಳಿಗೆ ಸರಿಯಾಗಿದೆ. ಇದೇ ಕೊಡುವುದಕ್ಕೆ ಬಹಳ ಜಾಸ್ತಿ. ಆದರೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾಯಿಸಬೇಕಾದರೆ ಒಂದು ತರಹ ಕಡಮೆ ದರ್ಜೆ ತೋರಿಸತಕ್ಕ ಸನ್ನಿವೇಶ ಬರುತ್ತದೆ. ನ್ಯಾಯಸ್ಥಾನದಲ್ಲಿ ಈ ರೀತಿಯಾಗುವುದಕ್ಕೆ ಅವಕಾಶವಿರಬಾರದು. ಎಲ್ಲ ಕಡೆಗಳಲ್ಲಿಯೂ ಕೂಡ ಒಂದೇ ದರ್ಜೆಗೆ ಇಳಿಸಿ ಸರಿ ಮಾಡಬೇಕು ಎಂದು ಹೇಳುತ್ತೇನೆ. ಇದರಲ್ಲಿ 'B' ಕಾಲಂ ತೆಗೆದುಹಾಕಿ ಒಂದೇ ಸಮನಾಗಿ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಶ್ರೀ ಇಜಾರಿ ಸಿರಸಪ್ಪ (ಹರಪನಹಳ್ಳಿ).—ಸ್ವಾಮಿ, ಮುಖ್ಯತಃ ಈ ಮಸೂದೆಯನ್ನು ನಾವು ಸ್ವಾಗತಿಸಬೇಕಾಗಿದೆ. ಯಾವ ಪ್ರಾಂತ ಪುನರ್ವಿಂಗಡಣೆಯಾಗಬೇಕು ಎಂದು ಹೋರಾಟ ಮಾಡುತ್ತಿದ್ದೆವೋ, ಎಲ್ಲರ ಮನಸ್ಸಿನಲ್ಲಿಯೂ ಉತ್ಕಟವಾದ ಯಾವ ಇಚ್ಛೆ ಇತ್ತೋ ಅದು ಇಂದು ಕೈಗೂಡುವ ಪ್ರಸಂಗ ಬಂದಿರುವುದರಿಂದ ನಾವು ಸಂತೋಷವಾಗಿ, ಹೃತ್ಪೂರ್ವಕವಾಗಿ ಈ ಮಸೂದೆಯನ್ನು ಸ್ವಾಗತ ಮಾಡಬೇಕಾದದು ನಮ್ಮ ಕರ್ತವ್ಯ. ಅದರ ಸಾಧಕ ಬಾಧಕ, ಆಗುಹೋಗು, ಒಳಿತು ಕೆಡಕು, ಇವುಗಳ ಕಡೆಗೆ ನಾನು ಅಷ್ಟಾಗಿ ಗಮನ ಕೊಡಲು ಇಚ್ಛಿಸುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಇದೇ ಮನೆಯಲ್ಲಿ ಈ ವಿಷಯದ ಮೇಲೆ ಸಂಪೂರ್ಣವಾಗಿ ಚರ್ಚೆಯಾಗಿ, ಇಲ್ಲಿನ ಅಭಿಪ್ರಾಯವನ್ನು ಕೇಂದ್ರಸರ್ಕಾರದವರು ತಿಳಿದು, ಆಲೋಚನೆಮಾಡಿ, ದೇಶದ ಹಿತಕ್ಕೆ ಯಾವ ರೀತಿಯ ಪುನರ್ವಿಂಗಡಣೆಯನ್ನು ನಾವು ಕೈಗೊಳ್ಳಬೇಕು ಎಂದು ನಿರ್ಧರಿಸಿ, ಆ ರೀತಿ ಒಂದು ಮಸೂದೆಯನ್ನು ನಮ್ಮ ಮುಂದೆ ಆಲೋಚನೆಗೆ ಕಳುಹಿಸಿಕೊಟ್ಟಿದ್ದಾರೆ. ಅದಕ್ಕಾಗಿ ನಾವು ಆ ವಿಚಾರವಾಗಿ ಹೆಚ್ಚು ಚರ್ಚೆ ಮಾಡುವ ಅವಶ್ಯಕತೆ ಇಲ್ಲವೆಂದು ನನ್ನ ಭಾವನೆ.

ಇದೇ ಸಂದರ್ಭದಲ್ಲಿ ಬಳ್ಳಾರಿಯು ಮೈಸೂರಿನ ಒಂದು ಭಾಗವಾಗಿ ತನ್ನ ನ್ಯಾಯವಾದ ಸ್ಥಾನವನ್ನು ಕಳೆದುಕೊಂಡು ಮತ್ತೆ ಬೇರೆ ಕಡೆಗೆ ಹೋಗಬೇಕಾದ ಒಂದು ಕಷ್ಟಪರಿಸ್ಥಿತಿ ಬಂದಾಗ ಅದರ ನ್ಯಾಯಸಿದ್ಧವಾದ ಸ್ಥಾನವನ್ನು ಮೈಸೂರಿನಲ್ಲಿಯೇ ಉಳಿಸಿಕೊಂಡು ಬರಲು ಪ್ರಯತ್ನಪಟ್ಟುದಕ್ಕಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೂ, ನಮ್ಮ ಸರ್ಕಾರಕ್ಕೂ, ಈ ಮಾನ್ಯ ಸಭೆಯ ಸದಸ್ಯರಿಗೂ, ಮೇಲ್ಮನೆಯ ಮಾನ್ಯ ಸದಸ್ಯರಿಗೂ ನಮ್ಮ ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಗೂ ಮತ್ತು ಇತರ ಮಹನೀಯರಿಗೂ, ಬಳ್ಳಾರಿಯನ್ನು ಮೈಸೂರಿನಲ್ಲಿಯೇ ಉಳಿಸಿಕೊಟ್ಟುದಕ್ಕಾಗಿ ಹಿಂದೂಸ್ತಾನ ಸರ್ಕಾರದವರಿಗೂ ಬಳ್ಳಾರಿ ಜಿಲ್ಲೆಯವರ ಪರವಾಗಿ ವಂದನೆಗಳನ್ನು ಅರ್ಪಿಸಬೇಕಾಗಿದೆ. ಬಳ್ಳಾರಿ ಜಿಲ್ಲೆಯವರು ಇವರಿಗೆಲ್ಲ ಕೃತಜ್ಞರಾಗಿದ್ದಾರೆ. ನಾನು ಇವರೆಲ್ಲರ ಉಪಕಾರವನ್ನೂ ಸ್ಮರಿಸ ಬಯಸುತ್ತೇನೆ.

ಮೂರನೆಯ ವಿಷಯ, ಬೌಂಡರಿ ಕಮಿಷನ್ ಏರ್ಪಡಿಸುವುದು ಅತ್ಯಗತ್ಯ. ನ್ಯಾಯವಾಗಿ ಜನರ ಇಚ್ಛೆಯ ಪ್ರಕಾರ ಮೈಸೂರು ಸಂಸ್ಥಾನದಲ್ಲಿ, ಹೊಸದಾಗಿ ನಿರ್ಮಿತವಾಗುವ ಮೈಸೂರು ಸಂಸ್ಥಾನದಲ್ಲಿ, ಸೇರಬೇಕಾದ ಅನೇಕ ಭಾಗಗಳು ಕೈಬಿಟ್ಟು ಹೋಗುವುದು ನಮಗೆಲ್ಲರಿಗೂ ಗೊತ್ತಿದೆ. ಆ ಭಾಗಗಳಲ್ಲಿರುವ ಜನರ ಇಚ್ಛೆಯ ಪ್ರಕಾರ ಆಯಾ ಭಾಗಗಳನ್ನು ಮೈಸೂರಿಗೆ ಸೇರಿಸಿಕೊಡುವುದಕ್ಕೆ ಹಿಂದೂಸ್ತಾನ ಸರ್ಕಾರದವರು ತೀವ್ರವಾಗಿ ಒಂದು ಬೌಂಡರಿ ಕಮಿಷನ್ ನಿಯಾಮಕ ಮಾಡಬೇಕು. ತನ್ಮೂಲಕವಾಗಿ ಜನರ ಇಚ್ಛೆಯಂತೆ ಇಲ್ಲಿಗೆ ಸೇರಬೇಕಾದ ಭಾಗಗಳನ್ನು ಮೈಸೂರಿಗೆ ಸೇರಿಸಬೇಕೆಂದು ಹೇಳುತ್ತೇನೆ.

ಅನಂತರ Zonal Councils ವಿಚಾರವಾಗಿ ಈ ಮಸೂದೆಯಲ್ಲಿ ಸೂಚನೆ ಬಂದಿದೆ. ಇದರಲ್ಲಿ ಹೇಳಿರುವ ಪ್ರಕಾರ Zonal Councils ಅವರು ಯಾವ ಕಾರ್ಯವನ್ನು ಮಾಡುವುದಕ್ಕೂ ಶಕ್ತರಾಗುವುದಿಲ್ಲವೆನ್ನುವ ಅಭಿಪ್ರಾಯವನ್ನು ನಾನು ಹೊಂದಿದ್ದೇನೆ. ಈ ಸರ್ಕಾರದ ಮುಖ್ಯ ಮಂತ್ರಿಗಳು ಒಬ್ಬರು, ಇನ್ನೂ ಇತರ ಸಂಸ್ಥಾನಗಳ ಮುಖ್ಯಮಂತ್ರಿಗಳು, ಪ್ಲಾನಿಂಗ್ ಕಮಿಷನ್ನಿನ ಒಬ್ಬ ಸದಸ್ಯರು, ಇವರುಗಳನ್ನೊಳಗೊಂಡ ಒಂದು ಕೌನ್ಸಿಲ್ ಕೇಂದ್ರ ಸರ್ಕಾರದ ಒಬ್ಬರು ಮಂತ್ರಿಗಳ ಅಧ್ಯಕ್ಷತೆಯಲ್ಲಿ ವಿವಾದಾಸ್ಪದವಾದ ಕೆಲವು ವಿಷಯಗಳನ್ನು ಚರ್ಚೆಮಾಡಿ ತಮ್ಮ ಸಲಹೆಗಳನ್ನು ಮಾತ್ರ ಕೇಂದ್ರ ಸರ್ಕಾರಕ್ಕೆ ನೀಡಬಲ್ಲರು. ಒಂದು ಸಂಸ್ಥಾನಕ್ಕೆ ಇನ್ನೊಂದು ಸಂಸ್ಥಾನದೊಡನೆ ಇರುವ ವಿವಾದಗಳನ್ನು ಪರಿಹರಿಸಿಕೊಳ್ಳಬೇಕಾದಲ್ಲಿ ಆ ಎರಡು ಸರ್ಕಾರಗಳೂ ಸೇರಿ ಒಂದು ರಾಜಿ ಮಾಡಿಕೊಳ್ಳುವುದು ಅಥವಾ ಒಂದು ನಿಷ್ಕರ್ಷೆಗೆ ಬರುವುದು ಸಾಧ್ಯವಿಲ್ಲದಿದ್ದಲ್ಲಿ ಈ Zonal Councilsನಲ್ಲಿ ಆ ವಿಷಯ ಚರ್ಚೆಯಾಗಿ ಅವರು ಕೇಂದ್ರಸರ್ಕಾರಕ್ಕೆ ಸಲಹೆ ಮಾಡುತ್ತಾರೆ. ಅದರ ಮೇಲೆ ಕೇಂದ್ರಸರ್ಕಾರದವರು ತೀರ್ಮಾನವನ್ನು ಕೊಡಬೇಕು. ಈ intermediate Zonal Councils ಸ್ಥಾಪಿಸಿ, ಎಲ್ಲ ಘರ್ಷಣೆಗೆ ಅವಕಾಶ ಕೊಡಬಹುದಾದ, ವಿವಾದಕ್ಕೆ ಅವಕಾಶ ಕೊಡಬಹುದಾದ ವಿಷಯಗಳನ್ನು, ಈ ಕೌನ್ಸಿಲ್‌ನಲ್ಲಿ ಸಂಬಂಧಪಟ್ಟ ಪ್ರತಿನಿಧಿಗಳು ಚರ್ಚಿಸಿ ಅನಂತರ ಅದರ ಮೇಲೆ ತೀರ್ಮಾನಕ್ಕೆ ಕೇಂದ್ರ ಸರ್ಕಾರದ ಮರೆ ಹೋಗಬೇಕಾದ ಪ್ರಸಂಗ ಇದರಿಂದ ಉದ್ಭವವಾಗಬಹುದು. ಇದಕ್ಕಾಗಿ, ಇಲ್ಲವೇ Zonal Councilsಗೆ ಸಂಪೂರ್ಣವಾಗಿ ಅಧಿಕಾರವನ್ನು ಕೊಡಬೇಕು, ಇಲ್ಲವೇ intermediary stage ನಲ್ಲಿರುವ ಈ Zonal Council ಗಳನ್ನು ರದ್ದುಮಾಡಿ ಕೇಂದ್ರ ಸರ್ಕಾರಕ್ಕೆ ನೇರವಾಗಿ ನಮ್ಮ ವಿವಾದಗಳನ್ನು ತೆಗೆದುಕೊಂಡುಹೋಗಿ ಅವರ ತೀರ್ಪನ್ನು ಪಡೆದುಕೊಳ್ಳುವಂತೆ ಇರಬೇಕು ಎಂದು ನನ್ನ ಅಭಿಪ್ರಾಯವನ್ನು ಸೂಚಿಸ ಬಯಸುತ್ತೇನೆ.

(ಶ್ರೀ ಇಬಾರಿ ಸಿರನಪ್ಪ.)

"ಇದುವರೆಗೂ ಮೈಸೂರು ಅಸೆಂಬ್ಲಿಯಲ್ಲಿರುವ ಸದಸ್ಯರ ಸಂಖ್ಯೆ 104 ಮತ್ತು ನಾಮಕರಣ ಸದಸ್ಯರು ಒಬ್ಬರು, ಒಟ್ಟು 105 ಮಂದಿ. ಪಾರ್ಲಿಮೆಂಟಿನಲ್ಲಿ ಒಂದು ಸದಸ್ಯ ಸ್ಥಾನವಿದ್ದರೆ ಅದಕ್ಕೆ 9ರಷ್ಟು ಜನ ಆಯಾ ಅಸೆಂಬ್ಲಿಯಲ್ಲಿರಬೇಕೆಂಬ ತತ್ವದ ಪ್ರಕಾರ ಸ್ಥಾನಗಳನ್ನು ನಿರ್ಧರಿಸಿ ಮೈಸೂರು ಅಸೆಂಬ್ಲಿಯಲ್ಲಿ 117 ಸ್ಥಾನಗಳಿರಬೇಕೆಂದು ನಿರ್ದಿಷ್ಟಪಡಿಸಿರುವುದು ಎಲ್ಲರಿಗೂ ಗೊತ್ತಿದೆ. ಈಗ ಎಲ್ಲ ಭಾಗಗಳೂ ಸೇರಿ ಹೊಸ ಮೈಸೂರು ಸಂಸ್ಥಾನವಾದ ಮೇಲೆ ಪಾರ್ಲಿಮೆಂಟಿನಲ್ಲಿ ಮೈಸೂರಿಗೆ 26 ಸ್ಥಾನಗಳು ಇರುತ್ತವೆ. ಇದರ ಒಂಭತ್ತರಷ್ಟು ಸ್ಥಾನಗಳು ಅಸೆಂಬ್ಲಿಯಲ್ಲಿ ಇರಬೇಕು, ಅಂದರೆ ಒಟ್ಟು 234 ಸ್ಥಾನಗಳನ್ನು ನಿರ್ದಿಷ್ಟಪಡಿಸಬೇಕಾದ್ದಕ್ಕೆ 182 ಸ್ಥಾನಗಳನ್ನು ಮಾತ್ರ ನಿರ್ದಿಷ್ಟಪಡಿಸಿರುವುದಕ್ಕೆ ಕಾರಣ ಗೊತ್ತಾಗಿಲ್ಲ. ನಮ್ಮ ದೇಶದಲ್ಲಿ ಜನರಿಗೆ ಸರಿಯಾದ ಪ್ರಾತಿನಿಧ್ಯ ದೊರಕಬೇಕಾದರೆ ಒಂದು ಪಾರ್ಲಿಮೆಂಟ್ ಸ್ಥಾನಕ್ಕೆ ಒಂಬತ್ತು ಅಸೆಂಬ್ಲಿ ಸ್ಥಾನಗಳು ಇರಬೇಕೆಂದು ಪರಿಗಣಿಸಿ ಮುಂದಿನ ಮೈಸೂರು ಅಸೆಂಬ್ಲಿಯಲ್ಲಿ 234 ಸ್ಥಾನಗಳನ್ನು ನಿರ್ದಿಷ್ಟಪಡಿಸಬೇಕೆಂದು ಹೇಳುತ್ತೇನೆ.

ಇನ್ನು ಲೆಜಿಸ್ಲೇಟಿವ್ ಕೌನ್ಸಿಲ್ ವಿಚಾರವಾಗಿ ಕಳೆದ ಅಧಿವೇಶನದಲ್ಲಿ ಕೆಲವು ಅಭಿಪ್ರಾಯಗಳನ್ನು ಸೂಚಿಸಿದ್ದೆ. ಮುಂಬರುವ ಮೈಸೂರು ವಿಧಾನ ಪರಿಷತ್ತಿನಲ್ಲಿ 60 ಖಾಯಂ ಸ್ಥಾನಗಳಿರಬೇಕೆಂದು ಸೂಚಿತವಾಗಿದೆ. ಈಗ ನಮ್ಮಲ್ಲಿ 40 ಜನ ಸದಸ್ಯರಿದ್ದಾರೆ. ಹೊರಗಡೆಯಿಂದ, ಮುಂಬೈ ಮತ್ತು ಮದರಾಸು ಭಾಗಗಳಿಂದ ಬರುವ ಸದಸ್ಯರ ಸಂಖ್ಯೆ 10 ಅಂದರೆ ಒಟ್ಟು 50 ಸದಸ್ಯರಾಗಿ ಇನ್ನೂ ಈಗ ಸದ್ಯಕ್ಕೆ ಹತ್ತೊಂಬತ್ತು ಸ್ಥಾನಗಳು ಖಾಲಿ ಇರುತ್ತವೆ. ಈ ಸ್ಥಾನಗಳಿಗೆ ಪ್ರಾತಿನಿಧ್ಯವಿಲ್ಲದ ಹೈದರಾಬಾದ್ ಮತ್ತು ಕೊಡಗು ಮುಂತಾದ ಪ್ರದೇಶಗಳಿಂದ ಪ್ರತಿನಿಧಿಗಳನ್ನು ಸೇರಿಸಿಕೊಂಡು ಕೆಲಸ ಮಾಡಬೇಕೆಂದು ಸೂಚಿಸ ಬಯಸುತ್ತೇನೆ.

2 P.M.

ಇನ್ನು ಕೊನೆಯದಾಗಿ ಸಂಬಳ ಸಾರಿಗೆಗಳ ಮತ್ತು ಹಣಕಾಸಿನ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ಮಾತ್ರ ಹೇಳಬೇಕಾಗಿದೆ. ಮೈಸೂರಿಗೆ ಬಂದು ಸೇರುವವರಿಗೆ ಸಂಬಳ ಕಡಮೆ ಮಾಡುವ ಒಂದು ಪ್ರವೃತ್ತಿ ಕಂಡುಬರುತ್ತಿದೆ. ಮಾನ್ಯಮಿತ್ರರು ಈಗಾಗಲೆ ಈ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಅನೇಕರಿಗೆ 3½-4ಸಾವಿರ ರೂಪಾಯಿಗಳ ಸಂಬಳ ಬರುತ್ತಿದೆ. ಹೈಕೋರ್ಟ್ ಜಡ್ಜಿಗಳಿಗೆ ಇತರ ಕಡೆಗಳಲ್ಲಿ ಮೈಸೂರಿನ ಜಡ್ಜಿಗಳಿಗಿಂತ ಹೆಚ್ಚಾಗಿ ಬರುತ್ತಾ ಇದೆ. ಹೈಕೋರ್ಟ್ ಜಡ್ಜಿಗಳಿಗೆ 2½ ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಸಂಬಳ ಇರಬಾರದು ಎಂದು ಹೇಳಿದ್ದಾರೆ. ಈ ರೀತಿ ಅಂತರ, ವ್ಯತ್ಯಾಸ ಇರಕೂಡದು. ಒಂದೇ ಕೆಲಸ ಮಾಡುವವರಿಗೆ ಹೆಚ್ಚು ಕಡಮೆಯಿರದೆ ಒಂದೇ ರೀತಿಯ ಸಂಬಳ ಸಾರಿಗೆಯಿರುವಂತೆ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರ್ಸುಮಾಡಬೇಕು. ಇಷ್ಟು ಹೇಳಿ ಈ ಮಸೂದೆಯನ್ನು ಸ್ವಾಗತಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೆ, ದೇಶದಲ್ಲಿ ತೊಡಕಿನ ಸಮಸ್ಯೆ ಎದ್ದಿದೆಯೆಂಬುದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಒಂದು ಸಾರಿ ತಪ್ಪು ಹೆಜ್ಜೆಯನ್ನಿಟ್ಟು ಅದರಮೇಲೆ ಇನ್ನೂ ತಪ್ಪುಮಾಡುತ್ತಿರುವುದರಿಂದ ಸಮಸ್ಯೆ ಇನ್ನೂ ಹೆಚ್ಚಿದೆ. ದೇಶದಲ್ಲಿ ಅಲ್ಲಲ್ಲಿ ಹೇಳಿಕೆ ಕೊಡುತ್ತಿದ್ದಾರೆ. ಶ್ರೀ ರಾಜಗೋಪಾಲಚಾರಿಯವರು ಹೇಳಿಕೊಟ್ಟಿದ್ದಾರೆ. ಅಸೆಂಬ್ಲಿಯಲ್ಲಿ ಸದಸ್ಯರು ನಾನಾ ರೀತಿ ಹೇಳುತ್ತಿದ್ದಾರೆ. ಹೀಗೆ ಅನೇಕಕಡೆ ಅನೇಕರು ತಮಗೆ ತೋರಿದಹಾಗೆ ಹೇಳುತ್ತಿರುವುದರಿಂದ ತೊಡಕು ಹೆಚ್ಚಾಗುತ್ತಾ ಇದೆ. ಹಿಂದೆ ಸಣ್ಣ ಪ್ರಾಂತಗಳು ಇದ್ದರೆ ಕೇಂದ್ರ ಸರ್ಕಾರ ಬಲಯುತವಾಗಿರುತ್ತದೆ, ದೊಡ್ಡ ಪ್ರಾಂತಗಳಾದರೆ ಕೇಂದ್ರ ಸರ್ಕಾರದ ಶಕ್ತಿ ಕಡಮೆಯಾಗುತ್ತದೆ ಎಂಬ ತತ್ವವನ್ನು ಹೇಳಿದ್ದರು. ಈಗ ನೆಹ್ರೂರವರು ಹಾಗೆ ಹೇಳುತ್ತಿದ್ದುದನ್ನು ಬದಲಾಯಿಸಿ ಪ್ರಾಂತೀಯ ಸರ್ಕಾರ ದೊಡ್ಡದಾದರೆ ಕೇಂದ್ರ ಸರ್ಕಾರ ಬಲಯುತವಾಗಿರುತ್ತದೆ ಎಂದು ಹೇಳಿದಮೇಲೆ ನಾವು ನಮ್ಮ ವಾದವನ್ನು ಬದಲಾವಣೆ ಮಾಡುವ ಸಂದರ್ಭವಿದೆ. ಆದ್ದರಿಂದ ಈಗ ಕೇಂದ್ರ ಸರ್ಕಾರದವರು ಒಂದು ತೀರ್ಮಾನವನ್ನು ಕೈಕೊಂಡು ಮೈಸೂರು ಮತ್ತು ಅದರ ಅಕ್ಕಪಕ್ಕದಲ್ಲಿರುವ ಪ್ರಾಂತಗಳು ಸೇರಿ ಒಂದು ಸರ್ಕಾರ ರಚನೆಮಾಡಬೇಕು ಎಂದು ಒಂದು ಕರಡು ಶಾಸನ ಕಳುಹಿಸಿರುವುದನ್ನು ಸ್ವಾಗತಿಸುತ್ತೇನೆ. ಅದರಲ್ಲಿ ಒಂದು ಬದಲಾವಣೆ ಮಾಡಿಕೊಂಡು ನಾವು ಒಪ್ಪುವುದು ಸರಿಯೆಂದು ಕಾಣುತ್ತದೆ. ಮೈಸೂರು, ಹಾಸನ, ಶಿವಮೊಗ್ಗ, ಉತ್ತರ ಕನ್ನಡಜಿಲ್ಲೆ ಈ ಪ್ರಾಂತಗಳಲ್ಲಿ ಜನಸಂಖ್ಯೆ ಪ್ರಮಾಣ ಕಡಮೆಯಿದ್ದು ವಿಸ್ತೀರ್ಣ ಹೆಚ್ಚಾಗಿದೆ. ಈ ಬಿಲ್ಲಿನಲ್ಲಿ ಹೇಳಿರುವ ಹಾಗೆ 182 ಜನ ಅಸೆಂಬ್ಲಿ ಸದಸ್ಯರಿದ್ದರೆ ಪ್ರಾತಿನಿಧ್ಯ ಬಹಳ ಕಡಮೆ. 50 ಸಾವಿರ ಪ್ರಜಾಸಂಖ್ಯೆ ಒಂದು ತಾಲ್ಲೂಕಿನಲ್ಲಿದ್ದು ಎರಡು ಮೂರು ತಾಲ್ಲೂಕುಗಳು ಸೇರಿ ಒಂದು ಕಾನ್ಸ್ಟಿಟ್ಯೂಯೆನ್ಸಿಯಾದರೆ ಮಲೆನಾಡಿಗೆ ಕಮ್ಮಿ ಪ್ರಾತಿನಿಧ್ಯ ದೊರೆಯುತ್ತದೆ. 26 ಜನರು ಪಾರ್ಲಿಮೆಂಟಿಗೆ ಬರಲು ಸಾಧ್ಯ. ಅಂಥ ಒಂಭತ್ತರ ಮಲ್ಟಿಪಲ್‌ಮಾಡಿ 234 ಜನ ಸದಸ್ಯರು ಅಸೆಂಬ್ಲಿಗೆ ಬರಬಹುದು, ಅದು ಸರಿಯಾಗುತ್ತದೆ. 75 ಸಾವಿರ ಪ್ರಜಾಸಂಖ್ಯೆಗೊಬ್ಬ ಪ್ರತಿನಿಧಿಯಾಗುತ್ತಾರೆ. ಹಾಗಿಲ್ಲದಿದ್ದರೆ ಹೆಚ್ಚಾಗಿ ಪ್ರಾತಿನಿಧ್ಯ ಸಿಕ್ಕದೆ ಹೋಗಬಹುದು. ಮುಖ್ಯಮಂತ್ರಿಗಳು ಹಿಂದಿನ ಭಾಷಣದಲ್ಲಿ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಸೆಂಬ್ಲಿಯಲ್ಲಿ ಕಡಮೆ ಸಂಖ್ಯೆಯಿದ್ದು ವಿವಿಧ ಪಂಗಡಗಳಾದರೆ ರಾಜ್ಯಾಡಳಿತ ನಡೆಸುವುದಕ್ಕೆ ತೊಂದರೆ, ಆದ್ದರಿಂದ 200 ರಿಂದ 250 ಜನ ಅಸೆಂಬ್ಲಿ ಸದಸ್ಯರಿರುವಂತೆ ಏರಿಯಾ ದೊಡ್ಡದಾಗಬೇಕೆಂದು ಚೀಫ್ ಮಿನಿಸ್ಟರ್‌ರವರು ಹೇಳಿದ್ದಾರೆ.

"It will have the democratic dignity, the necessary stability and the collective wisdom of the greater number of people."

ಆದ್ದರಿಂದ ಮುಖ್ಯಮಂತ್ರಿಗಳು ಹೇಳಿರುವ ಹಾಗೆ ಅಸೆಂಬ್ಲಿ ಸದಸ್ಯರ ಸಂಖ್ಯೆ 234 ಅಥವಾ 250 ಆಗುವಂತೆ ಬದಲಾವಣೆ ಮಾಡಲು ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ.

ಸಣ್ಣಪುಟ್ಟ ಪ್ರಾಂತಗಳು ಸೇರಿ ಒಂದು ಪ್ರಾಂತವಾಗಬೇಕೆಂದು ಎಸ್.ಆರ್.ಸಿ. ಕೊಟ್ಟ ವರದಿಯ ಪ್ರಕಾರ ಮೈಸೂರಿನ ಅಸ್ತಿತ್ವ ಕಳೆದು ಹೋಗುತ್ತದೆಂಬ ಅನುಮಾನವಿದೆ. ಈಗ ಮೈಸೂರು ಎಂಬ ಹೆಸರನ್ನೇ ಹೊಸರಾಜ್ಯಕ್ಕೆ ಇಟ್ಟುಕೊಳ್ಳಬೇಕೆಂದಿದೆ. ಕರಡು ಶಾಸನದಲ್ಲಿ ಏಳನೆಯ ಕ್ಲಾಜಿನಲ್ಲಿ ನೋಡುವುದಾದರೆ, ಮೈಸೂರು ಮತ್ತು ಇತರ ಪ್ರಾಂತಗಳು ಎಲ್ಲಾ ಸೇರಿ ಹೊಸ ಮೈಸೂರು ನಿರ್ಮಾಣವಾಗ

ಬೇಕೆಂದಿದೆ. ಮದರಾಸು ಪ್ರಾಂತದ ಕೆಲವು ಭಾಗ ಸೇರಿಸುವಾಗ 'added to that territory' ಎಂದೂ ಹೈದರಾಬಾದ್ ಪ್ರಾಂತದ ಕೆಲವು ಭಾಗ ಸೇರಿಸುವಾಗ 'added to that territory' ಎಂದೂ ಹೇಳಿದ್ದಾರೆ. ಇದು ಸರಿಯಾಗಿ ಕಾಣುವುದಿಲ್ಲ. ಮೈಸೂರಿನ ಅಸ್ತಿತ್ವವನ್ನು ಸುಮಾರು 80 ವರ್ಷಗಳಿಂದ ಒಂದು ರೀತಿಯಲ್ಲಿ ಕಾಪಾಡಿಕೊಂಡು ಬಂದಿರುವಾಗ ಅಕ್ಕಪಕ್ಕದ ಪ್ರಾಂತ ಸೇರಿ ಒಂದು ಪ್ರಾಂತ್ಯಮಾಡಿಕೊಳ್ಳಲಿ ಎಂದು ಹೇಳಿ ಮೈಸೂರು ಎಂಬ ಹೆಸರನ್ನಿಟ್ಟದ್ದಾರೆಯೇ ವಿನಾ ಮೈಸೂರಿನ ಜೊತೆಗೆ ಅಕ್ಕಪಕ್ಕದ ಪ್ರದೇಶ ಸೇರಬೇಕೆಂದು ಹೇಳಿದಹಾಗೆ ಕಾಣುವುದಿಲ್ಲ. ಆದ್ದರಿಂದ ಇದನ್ನು ಸ್ವಲ್ಪ ಮಾರ್ಪಾಡು ಮಾಡಬೇಕು.

ಜೋನಲ್ ಕೌನ್ಸಿಲ್ ಬಗ್ಗೆ ಕೆಲವರು ಅಭಿಪ್ರಾಯ ಕೊಟ್ಟರು. ಎಗ್ಜಿಕ್ಯೂಟಿವ್ ಪವರ್ಸ್ ಕೊಡಬೇಕೆಂದು ಮುಖ್ಯಮಂತ್ರಿಗಳು ಕೂಡ ಹೇಳಿದರು, ಅದನ್ನು ಕೊಟ್ಟರೆ ಬಹಳ ಚೆನ್ನಾಗಿರುತ್ತದೆಂದು ಹೇಳಿದರು. ಆದರೆ ಎಗ್ಜಿಕ್ಯೂಟಿವ್ ಪವರ್ಸ್ ಕೊಡುವುದು ಸರಿ ಹೋಗುವುದಿಲ್ಲ. ಇದರಿಂದ ಪಾರ್ಲಿಮೆಂಟಿಗಿರುವ ಹೆಚ್ಚಿನ ಅಧಿಕಾರ ಜೋನಲ್ ಕೌನ್ಸಿಲ್ಲಿಗೆ ದೊರೆತು ಕೇಂದ್ರ ಸರ್ಕಾರಕ್ಕೂ ಇತರ ಪ್ರಾಂತಗಳಿಗೂ ತಿಕ್ಕಾಟ ಬರುವುದಕ್ಕೆ ಸಾಧ್ಯವಾಗುತ್ತದೆ. ಈಗ ಸರ್ಕಾರದವರು ಡೆಪ್ಯುಟಿ ಕಮಿಷನರನ್ನು ನೇಮಕ ಮಾಡಿದ್ದಾರೆ, ಆದರೆ ರೆವೆನ್ಯೂ ಕಮಿಷನರು ಸರ್ಕಾರಕ್ಕೂ ಡೆಪ್ಯುಟಿ ಕಮಿಷನರಿಗೂ ಮಧ್ಯೆ ಇರುವುದು ಸಣ್ಣ ಸರ್ಕಾರ ಬೇರೊಂದು ಇರುವ ಹಾಗಿದೆ. ಹಾಗಾಗುವುದರಿಂದ ಜೋನಲ್ ಕೌನ್ಸಿಲ್ ಎಂಬುದು ಅಡ್ವೈಸರಿ ಕೌನ್ಸಿಲ್ ಆಗಿರಬೇಕೇ ಹೊರತು ಎಗ್ಜಿಕ್ಯೂಟಿವ್ ಕೌನ್ಸಿಲ್ ಆಗಿರಬಾರದು.

ಬೌಂಡರಿ ಡಿಸ್ಪ್ಯೂಟ್ಸ್‌ಗಳನ್ನು ಜೋನಲ್ ಕೌನ್ಸಿಲ್ ಚರ್ಚೆಮಾಡಿ ತೀರ್ಮಾನ ಮಾಡಬಹುದೆಂದಿದೆ. ಆದರೆ ಬೌಂಡರಿ ಡಿಸ್ಪ್ಯೂಟ್ಸ್ ಜೋನಲ್ ಕೌನ್ಸಿಲ್‌ನಲ್ಲಿ ಸೆಟ್ಲ್ ಆಗುವುದಿಲ್ಲ. ಅದನ್ನು ಬಿಟ್ಟು ಬಾಕಿ ಕೆಲಸವನ್ನು ಅದಕ್ಕೆ ವಹಿಸಿ ಬೌಂಡರಿ ಡಿಸ್ಪ್ಯೂಟ್ಸ್ ಬೌಂಡರಿ ಕಮಿಷನ್ನಿಗೆ ವಹಿಸಿ ತೀರ್ಮಾನ ಮಾಡುವುದು ಸೂಕ್ತವೆಂಬುದು ನನ್ನ ಅಭಿಪ್ರಾಯ.

ಆಮೇಲೆ, ದಕ್ಷಿಣ ಪ್ರದೇಶದ ವಿಚಾರವನ್ನು ಅನೇಕರು ಹೇಳಿದ್ದಾರೆ. ಆದರೆ ದಕ್ಷಿಣ ಪ್ರದೇಶವೆಂಬುದು ದ್ವಿಭಾಷಾ ಪ್ರಾಂತವಾಗಿರಬೇಕು, ಎರಡು ಭಾಷೆಗಳನ್ನು ಮಾತನಾಡುವವರನ್ನು ಸೇರಿಸಿ ಅದನ್ನು ರಚಿಸಬೇಕೆಂದು ಹೇಳುತ್ತಾರೆ. ಮೈಸೂರು ಸಂಸ್ಥಾನದಲ್ಲಿ ಈಗ ದ್ವಿಭಾಷೆಯಲ್ಲದೆ, ತ್ರಿಭಾಷೆ ಕೂಡ ಇದೆ. ಆ ಇನ್ನೊಂದು ಭಾಷೆಯವರು ಶೇಕಡ ಮೂವತ್ತು ಮಂದಿ ಇದ್ದಾರೆ. ಆದ್ದರಿಂದ ಈಗಲೇ ಮೈಸೂರು ದ್ವಿಭಾಷಾ ಪ್ರಾಂತವಾಗಿದೆ. ಇದಕ್ಕಿಂತ ಹೆಚ್ಚಿನ ಪ್ರಜಾ ಸಂಖ್ಯೆಯಿರುವ ಪ್ರಾಂತ ಮಾಡಿದರೆ ಅನೇಕ ಸಮಸ್ಯೆಗಳು ಉದ್ಭವಿಸಬಹುದು. ಹಾಗಾದರೆ, ಜನರಲ್ಲಿ ಸಮಾಧಾನವಿಲ್ಲದೆ ವೈಷಮ್ಯ ಬೆಳೆದು ಮತ್ತೆ ಎಸ್.ಆರ್.ಸಿ. ಮಾಡುವ ಸಂದರ್ಭ ಬರಬಹುದು ಎಂಬ ಹೆದರಿಕೆಯಿದೆ. ಬಹು ಭಾಷೆಗಳವರು ಸೇರಿದರೆ ಕಷ್ಟವಾಗಬಹುದು. ಶ್ರೀ ರಾಜಗೋಪಾಲಾಚಾರಿಯವರು ಜೋನಲ್ ಕೌನ್ಸಿಲ್‌ನಲ್ಲಿ ಪ್ರತಿಯೊಂದು ಪ್ರಾಂತದಿಂದಲೂ ದಾಮಾಷಾ ಪ್ರಕಾರ ಪ್ರತಿನಿಧಿಗಳು ಬರಲು ಅವಕಾಶಕೊಟ್ಟು ಅದನ್ನು ರಚಿಸಬಹುದು, ಅಪ್ಪರ್ ಹೌಸ್ ಬೇಡ ಎಂದು ನಿನ್ನೆ ಹೇಳಿದ್ದಾರೆ. ಹೀಗೆ ಅಭಿಪ್ರಾಯಪಡುತ್ತಾ ಹೋದರೆ ಒಂದು ತಪ್ಪು ಹೆಜ್ಜೆ ಇಡಬಹುದೆಂಬ ಅನುಮಾನವಿದೆ. ಆದರೆ, ಅನಿವಾರ್ಯದ ದೃಷ್ಟಿಯಿಂದ ಅಕ್ಕಪಕ್ಕದ ಇನ್ನೊಂದು ಭಾಷೆ ಮಾತನಾಡುವವರನ್ನು ಒಂದು ಪ್ರಾಂತಕ್ಕೆ ಸೇರಿಸಿದರೆ ಅದು ತಪ್ಪಲ್ಲ. ದಕ್ಷಿಣ ಪ್ರದೇಶವೆಲ್ಲಾ ಸೇರಿ ಒಂದು ದೊಡ್ಡ ಪ್ರಾಂತವಾಗಬೇಕು, ಯು.ಪಿ. ಅಲ್ಲಿ ಆರು ಕೋಟಿ ಪ್ರಜೆಯಿದೆ, ದಕ್ಷಿಣ ಪ್ರದೇಶದಲ್ಲಿ ಹತ್ತು ಕೋಟಿಯಾಗುತ್ತದೆ ಎಂದು ಹೇಳಿದರೆ ಅಂಥ ಬಹಳ ದೊಡ್ಡ ಪ್ರಾಂತವಾದರೆ ಯಾವ ಪ್ರದೇಶಕ್ಕೂ ಅನುಕೂಲವಾಗುವುದಿಲ್ಲ. ಆದ್ದರಿಂದ ಅಕ್ಕಪಕ್ಕದ ಒಂದು ಭಾಗ ಸೇರಿ ಇನ್ನೊಂದು ಭಾಷೆಯವರು ಈ ಸಂಸ್ಥಾನಕ್ಕೆ ಸೇರುವ ಪ್ರಜಾ ಸಂಖ್ಯೆ ಐವತ್ತು ಲಕ್ಷ ಅಥವಾ ಒಂದು ಕೋಟಿಯಾದರೆ ಪರವಾಗಿಲ್ಲ. ಹಾಗಿಲ್ಲದೆ ನಾಲ್ಕು ಕೋಟಿ ಜನ ಸೇರಿ ಒಂದು ದೊಡ್ಡ ಭಾಗವಾಗುವುದಾದರೆ ಅದನ್ನು ನಾನು ಒಪ್ಪುವುದಿಲ್ಲ. ತಿದ್ದುಪಡಿಗಳ ಮೇಲೆ ಚರ್ಚೆಯಾಗುವಾಗ ಬಾಕಿ ವಿಚಾರ ಹೇಳುತ್ತೇನೆ. ಈಗ ಕೇಂದ್ರ ಸರ್ಕಾರದವರು ಕಳುಹಿಸಿರುವ ಕರಡು ಮಸೂದೆಯನ್ನು ಒಪ್ಪಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು). — ಸ್ವಾಮಿ, ರಾಜ್ಯಗಳ ಪುನರ್ವಿಂಗಡಣಾ ಸಂಬಂಧದಲ್ಲಿ ನಮ್ಮ ಮುಂದೆ ಬಂದಿರುವ ಮಸೂದೆಯನ್ನು ನೋಡಿದೆ. ಹಿಂದೆ ನಾನು ಸ್ವಲ್ಪ ಏನೇನು ಹೇಳಬೇಕಾಗಿತ್ತೋ ಅದನ್ನು ಸ್ವಲ್ಪ ಮಟ್ಟಿಗೆ ಹೇಳಿದ್ದೆ. ಈಗ ಪುನಃ ಹೇಳಬೇಕಾಗಿ ಬಂತಲ್ಲಾ ಎಂಬ ಶಂಕೆಯಿದೆ. ಈಗ ನಮ್ಮ ಮೈಸೂರಿನ ಅಸ್ತಿತ್ವಕ್ಕೆ ಧಕ್ಕೆ ಬರುತ್ತದೆಂಬ ನಿಲುವಿನಲ್ಲಿ ನಾವು ಏನೇನು ಹೇಳಬೇಕೋ ಹೇಳಿ ಮೈಸೂರಿನ ವೈಶಿಷ್ಟ್ಯ ಹೋಗಬಾರದು, ಆಡಳಿತ ಸಣ್ಣದಾಗಿದ್ದು ನಮ್ಮ ಅಭಿವೃದ್ಧಿಕಾರ್ಯ ಎಲ್ಲ ನಡೆದಮೇಲೆ ಹತ್ತಾರು ವರ್ಷಗಳಾದಮೇಲೆ ಬೇಕಾದರೆ ಅಕ್ಕಪಕ್ಕದ ಪ್ರಾಂತಗಳನ್ನು ಸೇರಿಸೋಣ ಎಂಬ ಅಭಿಪ್ರಾಯವನ್ನು ವಿರೋಧ ಸಮ್ಮೇಳನದಲ್ಲಿ ಸ್ಥಾಯಿ ಸಮಿತಿಮಾಡಿ ಅದರ ಮೂಲಕ ಸೂಚಿಸಿದೆವು. ನಾವು ದೇಶದ ಹಿತಕ್ಕೆ ಧಕ್ಕೆ ಬಾರದಿರುವ ಹಾಗೆ ನ್ಯಾಯಬದ್ಧವಾಗಿರುವ ಕಾರ್ಯ ಕೈಕೊಂಡೆವು. ಈಗ ಬೊಂಬಾಯಿ ಮತ್ತು ಇತರ ಕಡೆ ಗಲಾಟೆಯಾಯಿತೆಂದು ಕೆಲವರು ಹೇಳಿದರು. ನಾವೂ ದಂಗೆ ಏಳಬಹುದಾಗಿತ್ತು; ಈಗಲೂ ನನಗೆ ದಂಗೆ ಏಳಬೇಕೆಂಬ ಮನಸ್ಸು ಇದ್ದೇ ಇದೆ. ಆದರೆ, ನಮ್ಮ ಮೈಸೂರು ದೇಶದ ಜನರು ಸತ್ಯಶೀಲರು, ರಾಮಾಯಣ, ಮಹಾಭಾರತ ಹುಟ್ಟಿದ ಸ್ಥಳದವರು, ಆಂಜನೇಯ ಮುಂತಾದವರು ತಿರುಗಿದ ಸ್ಥಳದಲ್ಲಿರುವವರು, ಭರತಖಂಡದಲ್ಲೆಲ್ಲಾ ಪ್ರಾಶಸ್ತ್ಯ ಮನ್ನಣೆ ಪಡೆದಿರುವವರು, ನಾವೇನಾದರೂ ಮಾಡಿದರೆ ಅದು ನಮ್ಮ ಮೈಸೂರಿನ ಚರಿತ್ರೆಗೆ ಧಕ್ಕೆ ತಂದೀತು, ಇರುವ ಗೌರವ ನಷ್ಟ ಮಾಡಿಕೊಳ್ಳಬಾರದು ಎಂದು ಭಾವಿಸಿ ಶಾಂತಿಯಿಂದ ನಮ್ಮ ಮನಸ್ಸಿನಲ್ಲಿರುವ ವಿಚಾರವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕೆಂದು ಸಾವಧಾನದಿಂದ ಇದ್ದೇವೆ. ನಮ್ಮ ಮೈಸೂರು ಜನರ ಬಗ್ಗೆ ಈಗ ಇಂಡಿಯಾ ಸರ್ಕಾರದಲ್ಲೂ ಮೂಡಿರುವ ಒಂದು ಒಳ್ಳೆಯ ಭಾವನೆ ಇನ್ನಾರ ವಿಚಾರದಲ್ಲೂ ಮೂಡಿಲ್ಲ. ಏಕೆಂದರೆ, ಇತರ ಕಡೆಗಳಲ್ಲಿ ನಡೆದ ಘಟನೆಗಳು ಮೈಸೂರಿನಲ್ಲಿ ನಡೆಯಲಿಲ್ಲ. ಇದಕ್ಕೆಲ್ಲಾ ನಾವು ಅವಕಾಶ ಕೊಡಲಿಲ್ಲ. ಅದರಮೇಲೆ ಪಂಚವಲಯ ಅಂದರೆ ದಕ್ಷಿಣ ಪ್ರದೇಶ ವಗೈರೆ ಮಾಡಬೇಕೆಂಬ ಸೂಚನೆ ಈಚೆಗೆ ಬಂತು. ಶ್ರೀ ರಾಜಗೋಪಾಲಚಾರಿಯವರು, ಶ್ರೀ ರಾಯ್, ಶ್ರೀ ಸಿನ್ಹ ಮುಂತಾದ ದೊಡ್ಡ ವ್ಯಕ್ತಿಗಳೆಲ್ಲಾ ಸಮುದ್ರಮಥನ ಮಾಡಿದಾಗ ವಿಷವನ್ನೆಲ್ಲಾ ರಾಕ್ಷಸರಿಗೆ ಕೊಟ್ಟು ಅಮೃತ ಹೇಗೆ ಉಳಿಸಿಕೊಂಡು

(ಶ್ರೀ ಶಿವನಂಜೇಗೌಡ.)

ದೇವತೆಗಳಿಗೆ ಕೊಟ್ಟರೋ ಅದರ ಹಾಗೆ ಮಾಡಿದೆ ಯೆಂದು ಹೇಳಿದರು. ಮಾನ್ಯ ಮುಖಂಡರಾದ ನೆಹ್ರೂಅವರು ಐದು ಪ್ರದೇಶಗಳನ್ನು ಮಾಡಬೇಕೆಂದು ಹೇಳಿದರು. ಕಾಂಗ್ರೆಸ್ ಹೈಕಮ್ಯಾಂಡಿನಿಂದ ಆ ಸಲಹೆ ಬಂತು. ಅದಕ್ಕೆ ವಿರುದ್ಧವಾಗಿ ನಾವು ಹೋಗ ಬಾರದು, ದೇಶದ ಭದ್ರತೆಗಾಗಿ ಐದು ದೊಡ್ಡ ಪ್ರಾಂತ ಗಳನ್ನು ಮಾಡಿದರೆ ದೇಶ ಬಲಯುತವಾಗಿ ಒಳ್ಳೆಯ ದಾಗುತ್ತದೆ ಎಂಬ ಅಭಿಪ್ರಾಯವನ್ನು ಅವರು ಯಾವಾಗ ಸಾರಿದರೋ ಆಗ ನಾವು ಪರಿವರ್ತನೆ ಮಾಡಿಕೊಳ್ಳಬೇಕೆಂದು ಮನಸ್ಸು ಮಾಡಿದೆವು. ಸಾಮಾನ್ಯವಾಗಿ ಇದು ಭದ್ರತೆಯನ್ನು ಭದ್ರಪಡಿ ಸುವ ವಿಚಾರ. ದಕ್ಷಿಣ ದೇಶ ನಮ್ಮದು. ಅದರಿಂದ ಹಿಂದೆ ಅಲ್ಪಸ್ವಲ್ಪ ಅನಾಹುತವಾಗಿದ್ದರೂ ಮುಂದೆ ದೊಡ್ಡ ದೇಶವಾದ ಮೇಲೆ ಹಣದ ಶಕ್ತಿ, ಸಾಮರ್ಥ್ಯ ಇವುಗಳಿಂದ ಆ ದೇಶ ಕೂಡಿರುತ್ತದೆ ಎಂದು ತಿಳಿದು ಹೈಕಮ್ಯಾಂಡಿನವರಿಗೆ ಗೌರವ ಕೊಡಲು ಮನಸ್ಸು ಮಾಡಿದೆವು. ದಕ್ಷಿಣ ಪ್ರದೇಶ ರಚನೆ ಎಲ್ಲರೂ ಒಪ್ಪತಕ್ಕ ಸೂಚನೆಯೇ ಆಗಿದೆ. ಈ ಬಿಲ್ಲಿನಲ್ಲಿ ಒಂದು ಸೂಚನೆ ಬಂದಿದೆ, ಅದನ್ನು ಸೇರಿಸಿಕೊಂಡು ಆಮೇಲೆ ಮುಂದಿನ ಯೋಚನೆ ಮಾಡೋಣ ಎಂಬ ಮಾತು ನನಗೆ ಸಮ್ಮತ ವಲ್ಲ ಎಂದು ಮಂಡ್ಯದಲ್ಲಿ ಸಮ್ಮೇಳನ ಮಾಡಿದೆವು. ಈಗಲೂ ಕಾಲ ಮಿಂಚಿಲ್ಲ. ದೇಶದ ಭದ್ರತೆಗೆ ಅನು ಕೂಲವೆಂದು ಮನ್ನಣೆ ಕೊಟ್ಟಿರುವ ಕೆಲಸವನ್ನು ಒಂದೇ ಸಾರಿ ದಕ್ಷಿಣ ಪ್ರದೇಶ ಮಾಡಬೇಕು. ಹೈಕಮ್ಯಾಂಡಿನವರು, ನೆಹ್ರೂಅವರು, ಹನುಮಂತಯ್ಯ ನವರು ಎಲ್ಲರೂ ಸೇರಿ ವ್ಯವಹರಿಸಿ ವ್ಯವಸ್ಥೆ ಮಾಡಿದರೆ ಬಹಳ ಚೆನ್ನಾಗಿರುತ್ತದೆ.

ಹಾಗೆಯೇ ನೋಡುತ್ತಿದ್ದರೆ ನನಗೂ ಕೂಡ ಇವರ ಸ್ನೇಹ ಕಳೆದುಕೊಳ್ಳಲು ಇಷ್ಟವಿಲ್ಲ. ಆದರೆ ಮೊದಲು ಇದಾಗಲಿ ಇದಾದಮೇಲೆ ಮತ್ತೊಂದು ಆಗಲಿ ಎಂದು ಇವರು ಹೇಳುತ್ತಿರುವುದು ಅಷ್ಟು ಸರಿಯಾಗಿಲ್ಲ. ಇವರೆಲ್ಲಾ ಮೊದಲು ನಮಗೆ ಒಂದು ವಿಶಾಲ ಭಾವನೆಯಿಲ್ಲ, ವಿಶಾಲವಾದಂಥ ಹೃದಯ ವಿಲ್ಲ ಎಂಬು ದಾಗಿ ಹೇಳುತ್ತಿದ್ದರು. ಆದರೆ ಇವರೆಲ್ಲಾ ಆ ದಿವಸ ಯಾರಿಗೆ ಹೀಗೆ ವಿಶಾಲ ಹೃದಯವಿಲ್ಲ—ಭಾವನೆಯಿಲ್ಲ ಎಂದು ಹೇಳುತ್ತಿದ್ದರೋ ಅವರೇ ಈ ದಿವಸ ಕೇಳುತ್ತಿ ರುವುದಕ್ಕಿಂತಲೂ ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇನ್ನೂ ಒಂದು ಹೆಚ್ಚಿನ ವಿಶಾಲ ಭಾವನೆಯಿಂದ ಈ ಪ್ರಾಂತ್ಯಗಳು ಮತ್ತಷ್ಟು ದೊಡ್ಡದಾಗಲಿ ಎಂದು ಹೇಳುತ್ತಿದ್ದರೆ ಅದು ಬೇಡ ಈಗ ಎಂದು ಇವರು ಹೇಳುತ್ತಿದ್ದಾರೆ. ಆದರೆ ಈ ದಿವಸ ನಾವೇನು ಹೇಳುತ್ತಿದ್ದೇವೋ ಅದು ನಮ್ಮ ಹೈಕಮ್ಯಾಂಡಿನವರ ಅಭಿಪ್ರಾಯಕ್ಕೆ ಅನುಗುಣವಾ ಗಿದೆ. ಆದಕಾರಣ ಈ ಮಸೂದೆಯಲ್ಲಿ ಈ ಅಭಿಪ್ರಾ ಯವನ್ನು ಅಳವಡಿಸಬೇಕೆಂದು ಹೇಳುತ್ತೇನೆ.

ಇನ್ನು ಚುನಾವಣಾಕ್ಷೇತ್ರಗಳ ವಿಚಾರ ತಿಳಿಸು ವುದಾದರೆ, ಮುಂದಕ್ಕೆ ಒಂದು ಲಕ್ಷ 20 ಸಾವಿರಕ್ಕೆ ಮೇಲ್ಪಟ್ಟ ಪ್ರಜಾಸಂಖ್ಯೆಗೆ ಒಬ್ಬರು ಸದಸ್ಯರಿರುವಂತೆ ಮಾಡುವುದು ಬಹಳ ಒಳ್ಳೆಯದೆಂದು ಹೇಳುತ್ತೇನೆ. ಹೀಗೆ ಪ್ರತಿನಿಧಿಸುವ ಜನಗಳ ಸಂಖ್ಯೆ ಕಡಮೆಯಾದರೆ ಬರತಕ್ಕಂಥ ಸದಸ್ಯರುಗಳ ಸಂಖ್ಯೆ ಜಾಸ್ತಿಯಾಗು ತ್ತದೆ. ಹಾಗೆ ಮಾಡಬಾರದು. ಆದುದರಿಂದ ಒಬ್ಬೊಬ್ಬ ಸದಸ್ಯರನ್ನು ಚುನಾಯಿಸತಕ್ಕಂಥ ಪ್ರಜಾ ಸಂಖ್ಯೆ ಯಾವತ್ತೂ ಒಂದು ಲಕ್ಷಕ್ಕೆ ಮೇಲಿರಬೇಕೇ ಹೊರತು ಅದಕ್ಕೆ ಕಮ್ಮಿ ಇರಬಾರದು.

ಇನ್ನು ಮೇಲ್ಮನೆಯ ವಿಚಾರದಲ್ಲಿ ಬಹಳ ಜನರಿಗೆ ವಿರೋಧಾಭಿಪ್ರಾಯವಿದ್ದಹಾಗೆ ಕಾಣುತ್ತಿದೆ. ಈ ವಿಚಾರದಲ್ಲಿ ನಮ್ಮ ಮಾಧವರಾಯರಿಗೆ ನಿನ್ನೆಯ ದಿವಸ ಒಂದು ಪ್ರಸವ ವೇದನೆಯೇ ಬಂದಹಾಗೆ ಕಾಣುತ್ತಿತ್ತು. ಆದರೆ ಆ ಮೇಲ್ಮನೆ ಇರಬೇಕಾದದ್ದು ಧರ್ಮ. ಅದನ್ನು ತೆಗೆಯಬೇಕೆಂದು ಅನೇಕರು ಹೇಳುತ್ತಿದ್ದಾರೆ. ಆದರೆ ಆ ರೀತಿ ಹೇಳುವುದು ಸರಿ ಯಲ್ಲ. ಆದರೆ ಏನೇ ಆಗಲಿ ಈ ಜಾತಿ, ಭಾಷೆ, ಧರ್ಮಗಳ ಮೇಲೆ ಯಾವತ್ತೂ ರಾಜ್ಯಗಳನ್ನು ಕಟ್ಟ ಬಾರದು, ಇದು ಸರಿಯಾದದ್ದಲ್ಲ ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*Sri K. S. VASAN (Kolar Gold Fields).—I give my welcome to this Bill that is before the House. This Bill when it is passed into Act would bring into being States in India which would correspond to the democratic aspirations and the patriotic urge of the peoples of India for the past 40 years. I fully appreciate certain changes that would be brought about as a result of the reorganisation of the States. Firstly, the institution of Rajpramukh would be abolished and the distinction between States as A, B and C would be done away with. It is a matter of pride for all the Kannada-speaking people that their aspiration for coming under a single administration achieving the unification of all the Karnataka would be achieved as a result of this Bill being passed into law. But the coming in of certain of the territories in the border of the proposed new State the people of which speak Kannada and who have expressed a desire to come into the new State, has not been conceded under this Bill. Equally some of the territories particularly Kolar District where the vast majority of the people speak Telugu and in culture and affinity feel one with the Andhras—they are proposed to be retained in the new State. It is said that the people in Kolar would be well off in culture, in civilisation, in language, economically and politically if they are continued in the new State. I hold the opinion that it is very idle to think that way and the people in Kolar District would only be an uncared for adjunct to the new State and they would be condemned to political and cultural backwardness if they are to continue in the new State. I am really surprised that there is an agitation by some

leaders against the unification of Karnataka. They talk in the name of Mysore's past glory. I refuse to join chorus with them because any one who knows the agricultural peasants, the industrial workers and the middle class employees, their conditions of life and work in the State, would not readily concede what all they speak about Mysore's past. It may be and it is to some extent true that the non-Mysore Karnataka territory is yet to be developed in so many ways. But this need not be exaggerated in the perspective of political and economic development of the new State that would come into being as a result of this Bill being passed into Law. I do not want to repeat all the arguments that have been said in favour of the new State. I would only add that it is a matter of pride and it is a victory for the democratic forces in the country and particularly in Mysore and non-Mysore Karnataka that a new State would come into being on the appointed day when this Bill would be passed into law.

With regard to the Zonal Councils, I would only suggest that the Zonal Councils should not be there merely as formal ones. They must be there only to co-ordinate the activities of the constituent Governments and they must promote unity among the peoples of the territories of the constituent States and for this it is necessary to associate non-official elected representatives of the peoples of these States in the activities of the Zonal Councils.

With these few remarks, I wholeheartedly welcome the Bill that is before the House.

